ನಂತರ ಈ ಭಯ ಇವಳಿಗೆ ಶಾಶ್ವತವಾಗಲಿದೆ. ಈ ಅಪ್ರಿಯ ಸತ್ಯ ಇವಳಿಗೆ ಗೊತ್ತೆ? ನಾನು ನೇರವಾಗಿ ಈಗ ಇವಳೆದುರಿಗೆ ಸಿಂಗ್ ಹೇಳಿದ ಮಾತುಗಳನ್ನೇ ಹೇಳಿಬಿಟ್ಟರೆ?– ಎನ್ನಿಸಿತು. ಆದರೆ... ಆ ಧೈರ್ಯವಾಗಲಿಲ್ಲ. ಗಣೇಶಯ್ಯನಿಗೆ ಹೇಳಿದ ಸುಳ್ಳನ್ನೇ ಇವಳಿಗೆ ಹೇಳಿ, ಆದಷ್ಟು ತಮಾಷೆ ಮಾಡುತ್ತಾ ಊಟ ಮುಗಿಸಿ ಮಲಗಿದೆ.

ದಿನ ಬೆಳಗಾದರೆ ನನ್ನ ಪಾಕೆಟ್ ಡೈರಿಯಲ್ಲಿ ಗುರುತು ಹಾಕತೊಡಗಿ ಇಂದಿಗೆ ಐವತ್ತೊಂಬತ್ತು ದಿನ ಗತಿಸಿ ಹೋಗಿದ್ದವು. ನಾನೆಷ್ಟೇ ಎಚ್ಚರಿಕೆಯಿಂದ ಇದ್ದರೂ ಆಗಾಗ ನಾನು ಏಕಾಂತದಲ್ಲಿ ಮೌನವಾಗಿ ಯೋಚಿಸುತ್ತಾ ಕುಳಿತು ಬಿಡುವ ರೀತಿಯನ್ನು ಕಂಡಾಗಲೆಲ್ಲ ಸುಶೀಲಾಗೆ ಅನುಮಾನ. 'ಯಾಕ್ರೀ ಹಾಗಿದೀರಿ ಏನೊ.. ಒಂಥರಾ? ಏನೋ ಯೋಚ್ನೆ ಮಾಡ್ತಿರ್ತಿರೀ– ನಿಟ್ಟುಸಿರು ಬಿಡ್ತೀರಿ... ರಾತ್ರಿ ಕನವರಿಸಿಕೊಳ್ತೀರಿ. ಮೊನ್ನೆ ರಾತ್ರಿಯಂತೂ 'ಸುಶೀ ಸುಶೀ– ನೀನೊಬ್ಳೇ ಹೇಗೆ ಕಾಲಹಾಕ್ತೀಯೆ ನಾನಿಲ್ಲದಾಗ?' ಅಂತ ಜೋರಾಗಿ ಅರಚಿ ಕೊಳ್ತಾ ಇದ್ರಲ್ಲ... ಏನು ಇದೆಲ್ಲ?' ಅಂತ ಹಿಂದಿನ ರಾತ್ರಿ ಅವಳು ಕೇಳೇಬಿಟ್ಟಳು. ನಾನು ಮುಗುಳ್ನಗೆಯನ್ನು ಬಲವಂತವಾಗಿ ಮುಖದ ಮೇಲೆಳೆದುಕೊಂಡು ಹೋಗೇ ಹುಚ್ಚೀ... ಏನೇನೋ ಹೇಳ್ತೀದಿಯ... ಎಂದು ಹೇಳಿ ಜಾರಿಕೊಂಡೆ. ಇನ್ನು ಒಂದೇ ದಿನ ನನ್ನ ಜೀವಿತದಲ್ಲಿ ಉಳಿದಿರುವುದು– ಏನಾದರೂ ಮುಖ್ಯವಾದ ಕೆಲಸಗಳನ್ನು ಇವತ್ತೇ ಪೂರೈಸಿಕೊಳ್ಳಬೇಕು. ಸಿಂಗ್ ಹೇಳಿದ್ದಂತೆ ಕಳೆದ ಐವತ್ತೆಂಟು ದಿನಗಳನ್ನೂ ಮಜಾ ಮಾಡುತ್ತಾ ಕಳೆಯಲಿಲ್ಲ. ನನ್ನ ಹೃದಯದಲ್ಲಿ ಕೊರೆಯುತ್ತಿದ್ದ ಈ ಮೃತ್ಯುಪ್ರಜ್ಞೆ ನನ್ನ ಸುಖಕ್ಕೆ ಅಡ್ಡಿಯಾಗತೊಡಗಿ, ಈ ಬಾಳಿನ ನಶ್ವರತೆಯ ಬಗ್ಗೆ ಜುಗುಪ್ಸೆ ಉಂಟಾಗತೊಡಗಿತ್ತು. ಇದುವರೆಗೂ ಆದಷ್ಟು ಜನರಿಗೆ ಕೈಲಾದ ಸಹಾಯ ಮಾಡಿಬಿಡುವುದು ಎಂಬುದೇ ನನ್ನ ಗುರಿಯಾಗಿತ್ತು. ಸಾಲ ಕೇಳಲು ಬಂದ ಸ್ನೇಹಿತರಾರಿಗೂ ಇಲ್ಲ ಎನ್ನದೆ ಹಣ ಕೊಟ್ಟೆ. ನಿತ್ಯ ಸಾಯಂಕಾಲ ಊರ ಮುಂದಿನ ಆಂಜನೇಯನ ದೇವಸ್ಥಾನಕ್ಕೆ ಹೋಗಿ ಅಲ್ಲೇ ಒಂದು ಗಂಟೆ ಒಬ್ಬನೇ ಕಾಲಕಳೆದು ಬರುತ್ತಿದ್ದೆ. ಸುಶೀಲಾ ನನ್ನ ಈ ಎಲ್ಲಾ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದ ಹಾಗಿತ್ತು. ಈ ನನ್ನ ಸಾವಿನ ವಿಚಾರವನ್ನು ನಾನು ಸಾಯುವ ಮುನ್ನ ಇವಳಿಗೆ ತಿಳಿಸಲೇ ಬೇಡವೆ ಎಂಬ ಜಿಜ್ಞಾಸೆಯೂ ನನ್ನನ್ನು ಭಾರೀ ಕಾಡಿತ್ತು. ಇವತ್ತೇ ನನ್ನ ಕೊನೆಯ ದಿನ. ಸುಶೀಲೆಗೆ ತಿಳಿಸಿಬಿಡಬೇಕು– ಬಾಯಿಬಿಟ್ಟು ಹೇಳದಿದ್ದರೂ ಪತ್ರವನ್ನಾದರೂ ಬರೆದಿಟ್ಟು ತಿಳಿಸಬೇಕು. ಹಾಗೆಂದೇ, ಬೆಳಿಗ್ಗೆ ಕಾಫಿ ಆದ ತಕ್ಷಣ ಮುಂದಿನ ರೂಮು ಸೇರಿ ಬಾಗಿಲು ಮುಚ್ಚಿಕೊಂಡು ಪತ್ರವನ್ನು ಬರೆಯಲು ಕುಳಿತೆ. ಆದಿನ ಭಾನುವಾರ ಬೇರೆ – ಎಲ್ಲಿಗೂ ಹೋಗುವ ಆತುರವಿರಲಿಲ್ಲ–ಇಷ್ಟಕ್ಕೂ ನನಗೇಕೆ ಆ ಚಿಂತೆಯೆಲ್ಲ? ಹೇಗೂ ನಾನೀ ಪ್ರಪಂಚಕ್ಕೆ ಒಂದೇ ದಿನದ ಅತಿಥಿ. ಪತ್ರವನ್ನು ಹೇಗೆ ಪ್ರಾರಂಭಿಸಲಿ.

'ನನ್ನ ನತದೃಷ್ಟ ಸುಶೀ... ಎನ್ನಲೇ? ಛೆ... ಅವಳಿಗಿಂತಲೂ ನತದೃಷ್ಟನೆಂದರೆ ನಾನೇ... ಅಥವಾ ಸುಮ್ಮನೆ, 'ಪ್ರಿಯ ಸುಶೀ...' ಎಂದರೆ! ಸಾವಿನ ಕೊನೆಯ ಗಳಿಗೆಯಲ್ಲೂ ಈ ಭಾಷೆಯ ತೊಡಕುಗಳು ನನ್ನನ್ನು ಜೀವಂತವಾಗಿ ಕಾಡುತ್ತಿರುವ ಬಗ್ಗೆ ತುಂಬಾ ಬೇಸರ. ಆಶ್ಚರ್ಯ. ವ್ಯಸನಗಳು ಒಟ್ಟಿಗೇ ಉಂಟಾದವು!... ಹೀಗೆ ಜಿಜ್ಞಾಸೆ ಮಾಡುತ್ತಾ ಕುಳಿತುಕೊಳ್ಳಲು ಸಮಯವಿಲ್ಲವಲ್ಲ... ಕೊನೆಗೆ ಹೀಗೆ ತೀರ್ಮಾನಿಸಿದೆ... ಮೊದಲು ಆ ದಿನ ಸಿಂಗ್ ಅವರನ್ನು ಭೇಟಿಯಾದಾಗಿನಿಂದ, ಅವರು ನುಡಿದ ಭವಿಷ್ಯವಾಣಿಯವರೆಗೂ ಚಾಚೂ ತಪ್ಪದಂತೆ ಬರೆದುಬಿಡುವುದು ಆನಂತರ, ಪತ್ರದ ಪ್ರಾರಂಭದಲ್ಲಿ ಏನೆಂದು ಬರೆಯಬೇಕೋ